ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : / Telephone: 08382 226406, 226471, 08382 226603 (Fax)
Email: dckarwar@gmail.com
Website: http://uttara kannada.nic.in

ನಂ:ಕಂಶಾ/ಸಿಬ್ಬಂದಿ(2)/ವಿವ-38/2017-18

ದಿನಾಂಕ:23-08-2017

## ಅಧಿಕೃತ ಜ್ಞಾಪನ

**ವಿಷಯ:** ಉತ್ತರ ಕನ್ನಡ ಜಿಲ್ಲೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗರ ಹುದ್ದೆಗಳಿಗೆ ನೇಮಕಾತಿಯ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ತಾತ್ಕಾಲಿಕ ಕಾಯ್ದಿರಿಸಿದ ಪಟ್ಟಿ ಪ್ರಕಟಿಸುವ ಕುರಿತು.

**ಉಲ್ಲೇಖ:** 1) ಈ ಕಾರ್ಯಾಲಯದ ಅಧಿಸೂಚನೆ ಸಮಸಂಖ್ಯೆ ದಿನಾಂಕ 13-07-2017.
2) ಈ ಕಾರ್ಯಾಲಯದ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ 08-08-2017.

<<<>>>

ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಗ್ರಾಮ ಲೆಕ್ಕಿಗ ಹುದ್ದೆಗಳಿಗೆ ನೇರ ನೇಮಕಾತಿ ಕುರಿತು ಉಲ್ಲೇಖ (1) ರಂತೆ ಅಧಿಸೂಚನೆ ಹೊರಡಿಸಿ ಆನ್‌ಲೈನ್ ಮುಖಾಂತರ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅಭ್ಯರ್ಥಿಗಳ ನೇಮಕಾತಿ ಕುರಿತು 1:5 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನಾ ಪಟ್ಟಿಯನ್ನು ಉಲ್ಲೇಖ(2)ರಂತೆ ವೆಬ್‌ಸೈಟನಲ್ಲಿ ಪ್ರಕಟಿಸಲಾಗಿತ್ತು. ಮತ್ತು ದಿನಾಂಕ 22-08-2017 ರಂದು ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲನೆಗೆ ಕರೆಯಲಾಗಿತ್ತು.

ಸದ್ರಿ ಪರಿಶೀಲನಾ ಪಟ್ಟಿಗೆ (1:5) ಆಕ್ಷೇಪಣೆ ಸಲ್ಲಿಸಲು ದಿನಾಂಕ:17-08-2017ರ ವರೆಗೆ ಸಮಯವನ್ನು ನಿಗದಿಪಡಿಸಲಾಗಿತ್ತು. ಸದರಿ ಅವಧಿಯಲ್ಲಿ ಲಿಖಿತ ರೂಪದಲ್ಲಿ ಒಂದು ಆಕ್ಷೇಪಣೆ ಸ್ವೀಕೃತವಾಗಿದ್ದು ಸದರಿ ಆಕ್ಷೇಪಣೆಯನ್ನು ತಿರಸ್ಕರಿಸಲಾಗಿದೆ.

ದಿನಾಂಕ:22-08-2017 ರಂದು ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆಸಲಾದ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳ ದಾಖಲೆಗಳನ್ನು ನಿಯಮಾನುಸಾರ ಪರಿಶೀಲಿಸಿ 1) **ತಾತ್ಕಾಲಿಕ ಆಯ್ಕೆ ಪಟ್ಟಿ** 2) ತಾತ್ಕಾಲಿಕ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿ ಮತ್ತು 3) ಅಭ್ಯರ್ಥಿಗಳ ತಿರಸ್ಕೃತ ಪಟ್ಟಿ ಸಿದ್ಧಪಡಿಸಿ ಜಿಲ್ಲಾ ವೆಬ್‌ಸೈಟ http://uttarakannada.nic.in ನಲ್ಲಿ ಪ್ರಚಾರಪಡಿಸಲಾಗಿದೆ.

ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿ/ ತಾತ್ಕಾಲಿಕ ಕಾಯ್ದಿರಿಸಿದ ಆಯ್ಕೆ ಪಟ್ಟಿ ಮತ್ತು ವಿವಿಧ ಕಾರಣಗಳಿಂದ ತಿರಸ್ಕರಿಸಿದ ಪಟ್ಟಿಯಿಂದ ಅಭ್ಯರ್ಥಿಗಳು ಯಾರಾದರೂ ಭಾದಿತರಾದಲ್ಲಿ ದಿನಾಂಕ:06-09-2017 ರ ಸಂಜೆ 5-30 ಗಂಟೆ ಒಳಗಾಗಿ ತಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ ಜಿಲ್ಲಾಧಿಕಾರಿಗಳು, ಉತ್ತರ ಕನ್ನಡ ಕಾರವಾರರವರಿಗೆ ಸಲ್ಲಿಸತಕ್ಕದ್ದು. ಇ-ಮೇಲ್ ಮುಖಾಂತರ ಸಲ್ಲಿಸಲಾಗುವ ಮತ್ತು ನಿಗದಿತ ಅವಧಿಯ ನಂತರ ಸ್ವೀಕರಿಸಲಾಗುವ ಆಕ್ಷೇಪಣೆಗಳನ್ನು ಗಣನೆಗೆ ತೆಗೆದುಕೊಳ್ಳಲಾಗದು. ಆಕ್ಷೇಪಣೆ ಸಲ್ಲಿಸುವ ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸ, ದೂರವಾಣಿ/ ಮೊಬೈಲ್ ಸಂಖ್ಯೆ/ಇ-ಮೇಲ್ ಐಡಿ (ಹೊಂದಿದ್ದಲ್ಲಿ) ವಿವರವನ್ನು ತಪ್ಪದೇ ಸಲ್ಲಿಸಬೇಕು.

23/8

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಗ್ರಾಮ ಲೆಕ್ಕಿಗರ ನೇರ ನೇಮಕಾತಿ ಪ್ರಾಧಿಕಾರ
ಉತ್ತರ ಕನ್ನಡ ಜಿಲ್ಲೆ ಕಾರವಾರ.

230817

**ಪ್ರತಿ:**

1) ಡಿಸ್ಟ್ರಿಕ್ಟ್ ಇನ್‌ಫೊರಮೆಟಿಕ್ ಅಧಿಕಾರಿ, ಎನ್‌ಐಸಿ ಕಾರವಾರ

2/- ಲಗ್ತ ಇಟ್ಟ ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ತಾತ್ಕಾಲಿಕ ಕಾಯ್ದಿರಿಸಿದ ಅಭ್ಯರ್ಥಿಗಳ ಪಟ್ಟಿ ಹಾಗೂ ಅಭ್ಯರ್ಥಿಗಳ ತಿರಸ್ಕೃತ ಪಟ್ಟಿಯನ್ನು ತಕ್ಷಣವೇ ಜಿಲ್ಲಾ ವೆಬ್‌ಸೈಟನಲ್ಲಿ ಪ್ರಚಾರ ಪಡಿಸಲು ಕೋರಿದೆ.

2) ಈ ಕಾರ್ಯಾಲಯದ ಸೂಚನಾ ಫಲಕಕ್ಕೆ.